ಸಂಬಂಧಪಟ್ಟಂತೆ ಪ್ರಶ್ನೆಯನ್ನು ಅಲ್ಲಿ ಸರ್ವಋತು ಬಂದರನ್ನು ಮಾಡುತ್ತೇವೆಂದು ಉತ್ತರವನ್ನು ಕೊಟ್ಟಿದ್ದೆ. ವಾಣಿಜ್ಯ ಚಟುವಟಿಕೆಗಳ ಬಂದರಿನಲ್ಲಿ ನಾವು ಮಾಡುತ್ತಿಲ್ಲ. ಮೀನುಗಾರಿಕಾ ಬಂದರಿನಲ್ಲಿ ಸರ್ವಋತು ಬಂದರನ್ನು ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:- ನಾನು ಕೇಳಿರತಕ್ಕ ಪ್ರಶ್ನೆ ಎಂದರೆ ಸರ್ವ ಋತು ಬಂದರು ಎಂದರೆ ಯಾವುದು? ತಾವು ಮೀನುಗಾರಿಕಾ ಸಚಿವರೆಂಬ ದೃಷ್ಟಿಯಿಂದ ಮೀನುಗಾರಿಕಾ ಸರ್ವಋತು ಬಂದರು ಎಂದು ನಾನು ಪ್ರಶ್ನೆಯನ್ನು ಕೇಳಿಲ್ಲ. ಗಂಗೊಳ್ಳಿಯಲ್ಲಿ ಮಾಡುತ್ತೇವೆ ಎಂದು ಈಗ ತಾವು ಹೇಳಿದ್ದೀರಿ.

ಅಧ್ಯಕ್ಷರು:- ಕೇಂದ್ರ ಸರ್ಕಾರ ನಿಮ್ಮ ಕೈಯಲ್ಲಿದೆ, ನೀವು ಪ್ರಸ್ತಾಪ ಮಾಡಿ.

ಶ್ರೀ ಕೆ.ಜಯಪ್ರಕಾಶ ಹೆಗಡೆ:- ಇದರ ಬಗ್ಗೆ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಕೋಸ್ಟಲ್ ಇಂಜಿನಿಯರಿಂಗನವರು ಪ್ರಿಲಿಮಿನರಿ ಸರ್ವೆ ಮಾಡಿದ್ದಾರೆ. ಫೈನಲ್ ರಿಪೋರ್ಟನ್ನು ಕೊಡುವಂತೆ ನಾವು ಕೇಳಿದ್ದೇವೆ. ಅದು ಬಂದ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ.

ವಿಷಯ:- ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಅಧುನೀಕರಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 22(143ಎ)

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ):- ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ವಾರ್ತಾ ಮತ್ತು ಪ್ರಚಾರ ಇಲಾಖೆಯನ್ನು ಸಮಗ್ರವಾಗಿ ಅಧುನೀಕರಣ ಮಾಡಲು ಸರ್ಕಾರದವರು ಯೋಚಿಸಿರುವರೇ?

ಆ) ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ಸಂಖ್ಯೆ ಎಷ್ಟು? (ದರ್ಜಿವಾರು ವಿವರವನ್ನು ಒದಗಿಸುವುದು) .

ಶ್ರೀ ಎಂ.ಸಿ.ನಾಣಯ್ಯ(ವಾರ್ತಾ ಮತ್ತು ಪ್ರಚಾರ ಸಚಿವರು):-

(ಅ) ಹೌದು

(ಆ) ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ: 108, ದರ್ಜಿವಾರು ವಿವರ ಕೆಳಕಂಡಂತಿದೆ:

ಗುಂಪು 'ಎ' - 10 ಹುದ್ದೆಗಳು
ಗುಂಪು 'ಬಿ' - 2 ಹುದ್ದೆಗಳು
ಗುಂಪು 'ಸಿ' - 66 ಹುದ್ದೆಗಳು
ಗುಂಪು 'ಡಿ' - 30 ಹುದ್ದೆಗಳು

ಶ್ರೀ ವಾಟಾಳ್ ನಾಗರಾಜ್:- ಅವರ ಉತ್ತರದಲ್ಲಿ, ತಮ್ಮ ಇಲಾಖೆಯಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಎಂದರೆ 108 ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದಾರೆ. ಇದು ಬಹಳ

ಪ್ರಾಮುಖ್ಯವಾದ ಇಲಾಖೆ. ಸರ್ಕಾರ ಮಾಡಿದಂಥ ಪ್ರಗತಿಯ ಕಾರ್ಯಗಳನ್ನು ದೇಶಕ್ಕೆ ತಿಳಿಸುವ ಪ್ರಚಾರ ಇಲಾಖೆ. ಈ ಪ್ರಚಾರ ಇಲಾಖೆಯಲ್ಲಿ ಎಲ್ಲಾ ವರ್ಗಕ್ಕೆ ಸೇರಿದ 108 ಹುದ್ದೆಗಳನ್ನು ಖಾಲಿ ಇಟ್ಟುಕೊಂಡಿದ್ದಾರೆ. ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ? ವಾರ್ತಾ ಮತ್ತು ಪ್ರಚಾರ ಇಲಾಖೆಯನ್ನು ಆಧುನೀಕರಣ ಮಾಡುವ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದರೆ ಹೌದು ಎಂದು ಹೇಳಿದ್ದೀರಿ. ಆ ಕ್ರಮಗಳು ಯಾವುವು? 108 ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ ಎಂಬುದನ್ನು ತಾವು ಹೇಳಬೇಕು.

ಶ್ರೀ ಎಂ.ಸಿ.ನಾಣಯ್ಯ:- ಆಧುನೀಕರಣದ ಬಗ್ಗೆ ಮುಖ್ಯವಾಗಿ ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದ್ದಾರೆ. ನಮ್ಮ ವಾರ್ತಾ ಇಲಾಖೆ ಈಗ ಎಲ್ಲಾ ಮೀಡಿಯದಲ್ಲಿ ಟೆಕ್ನಾಲಜಿಯಲ್ಲಿ ಮುಂದೆ ಹೋಗತಕ್ಕ ಸಂದರ್ಭದಲ್ಲಿ ನಾವು ತೆಗೆದುಕೊಂಡಿರತಕ್ಕ ಕಾರ್ಯಕ್ರಮಗಳಲ್ಲಿ ಒಂದು, ಈಗ ಎಲ್ಲಾ ಜಿಲ್ಲೆಗಳಿಗೆ ಈ ಮಾಹಿತಿ ಕೊಡುವುದಕ್ಕೆ ನಿಕ್‌ನೆಟ್ ವ್ಯವಸ್ಥೆ ಏನಿದೆ ಅದನ್ನು ಬಳಸಿಕೊಳ್ಳಲಾಗುತ್ತಿದೆ. ಪ್ರತಿಯೊಂದು ಜಿಲ್ಲೆಯಲ್ಲಿರತಕ್ಕ ನಮ್ಮ ಕಛೇರಿಗಳಲ್ಲಿ ಫ್ಯಾಕ್ಸ್ ವ್ಯವಸ್ಥೆ ಮಾಡಿದ್ದೇವೆ. ಕೂಡಲೇ ಮೆಸೇಜ್ ಕೊಟ್ಟು ಕೆಲಸ ಮಾಡುವುದು. ಕಂಪ್ಯೂಟರ್ ಮುಖಾಂತರ ಡ್ಯಾಟಾ ಇಟ್ಟುಕೊಂಡು ಪ್ರತಿ ಜಿಲ್ಲೆಗೆ ರವಾನೆ ಮಾಡತಕ್ಕ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇದರ ಜೊತೆಯಲ್ಲಿ ಮಾನ್ಯ ವಾಟಾಳ್ ನಾಗರಾಜ್ ಅವರು ನನ್ನ ಇಲಾಖೆಯ ವಿಷಯ ಸಮಿತಿಯ ಅಧ್ಯಕ್ಷರಾಗಿ ಇನ್‌ಫಾರ್ಮೇಷನ್ ಮತ್ತು ಪಬ್ಲಿಸಿಟಿಗೆ ಸಂಬಂಧಪಟ್ಟ ಹಾಗೆ ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳನ್ನು ಜಾರಿಗೆ ತರಬೇಕಾದರೆ ಸ್ವಲ್ಪಮಟ್ಟಿಗೆ ಹಣದ ಮುಗ್ಗಟ್ಟು ಇದೆ. ಅದಕ್ಕೋಸ್ಕರ ನನ್ನ ಇಲಾಖೆಗೆ ಹತ್ತು ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಮಂಜೂರ್ಮಾಡಿಕೊಡಬೇಕೆಂದು ಮಾನ್ಯ ಅರ್ಥ ಸಚಿವರನ್ನು ಕೇಳಿದ್ದೇನೆ. ಕೆಲವು ಅಗತ್ಯವಾಗಿರತಕ್ಕ ಕಾರ್ಯಕ್ರಮಗಳನ್ನು ಜಾರಿಗೆ ತರುವುದು, ಇನ್‌ಫಾರ್‌ಮೇಷನ್ ಸೆಂಟರ್ ಅಪ್‌ಗ್ರೇಡ್ ಮಾಡತಕ್ಕದ್ದು, ಮೊಬೈಲ್ ವ್ಯಾನ್‌ಗಳನ್ನು ಕೊಂಡು ಸರ್ಕಾರ ಮಾಡಿರತಕ್ಕ ಕಾರ್ಯಕ್ರಮಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ತಲುಪಿಸುವುದಕ್ಕೆ ಹೆಚ್ಚಿನ ಹಣ ಕೊಡಬೇಕೆಂದು ಕೇಳಿ, 1995-96ಕ್ಕೆ 30 ಲಕ್ಷ ರೂಪಾಯಿಗಳನ್ನು ಹೆಚ್ಚುವರಿ ಕೊಟ್ಟಿದ್ದಾರೆ. ಆ ಹಣದ ಜೊತೆಗೆ ನಮ್ಮ ಹಣ ಸೇರಿಕೊಂಡು 4 ಡಿವಿಜನ್‌ಗಳಲ್ಲಿ ಮತ್ತು ಹತ್ತು ಜಿಲ್ಲೆಗಳಲ್ಲಿ ಮೊಬೈಲ್ ವ್ಯಾನ್ ತೆಗೆದುಕೊಂಡಿದ್ದೇವೆ. 1996-97ಕ್ಕೆ ಏನು 6 ಜಿಲ್ಲೆಗಳಿಗೆ ಮೊಬೈಲ್ ವ್ಯಾನ್ ತೆಗೆದುಕೊಂಡು ವಿಡಿಯೋ ಅಳವಡಿಸಿಕೊಂಡು ನಮ್ಮ ಇಲಾಖೆಯ ಪ್ರಗತಿಗಳನ್ನು ವಿವಿಧ ಕಾರ್ಯಕ್ರಮಗಳನ್ನು ಗ್ರಾಮಾಂತರ ಜನರಿಗೆ ತಲುಪಿಸುವುದಕ್ಕೆ ನಾವು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇದಕ್ಕೆ ಇನ್ನೂ ಹೆಚ್ಚಿನ ಹಣ ಕೇಳಿದ್ದೇವೆ, ಹಣ ಕೊಡುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ಇಲಾಖೆಯಲ್ಲಿರತಕ್ಕ ಖಾಲಿ ಹುದ್ದೆಗಳ ಬಗ್ಗೆ ಹೇಳುವುದಾದರೆ, ಅರ್ಥ ಇಲಾಖೆಯಿಂದ ಇಕಾನಮಿ ಮೆಷರ್ಸ್ ಎಂದು ಹೇಳಿಕೊಂಡು ಸ್ವಲ್ಪ ಮಟ್ಟಿಗೆ ನಿಮಗೆ ಮುಗ್ಗಟ್ಟು ಇದೆ. ಆದರೂ ಇದರಲ್ಲಿ ಅವಶ್ಯಕವಾಗಿ ಬೇಕಾಗಿರತಕ್ಕ ಹುದ್ದೆಗಳನ್ನು ತುಂಬುವುದಕ್ಕೆ ನಾನು ಈಗಾಗಲೇ ಆರ್ಥಿಕ ಇಲಾಖೆಗೆ ಪತ್ರ ಬರೆದಿದ್ದೇನೆ. ಅರ್ಥ ಸಚಿವರು ಅದಕ್ಕೆ ಅನುಮತಿ ಕೊಡುತ್ತೇವೆಂದು ಹೇಳಿದ್ದಾರೆ. ಮುಂದಿನ 3 ತಿಂಗಳಲ್ಲಿ ಬಹಳ ಅವಶ್ಯಕವಾಗಿರತಕ್ಕ ಹುದ್ದೆಗಳನ್ನು ತುಂಬುವುದಕ್ಕೆ ಅನುಮತಿ ಕೊಟ್ಟರೆ ನಾನು ಆ ಕೆಲಸ ಮಾಡುತ್ತೇನೆ.

ಅಧ್ಯಕ್ಷರು:- ಯಾರು ಪ್ರಶ್ನೆ ಕೇಳಿದ್ದು, ಅವರೋ ನೀವೋ ಎಂದು ನನಗೆ

ಅರ್ಥವಾಗುತ್ತಿಲ್ಲ.

★**ಶ್ರೀ ವಾಟಾಳ್ ನಾಗರಾಜ್:-** ಅವರು ಪ್ರಶ್ನೆಯನ್ನು ಅರ್ಥ ಸಚಿವರಿಗೆ ಕೇಳಿದ್ದಾರೆ ಹಣ ಒದಗಿಸಿ ಎಂದು. ಯಾರ ಪರವಾಗಿ ಅಲ್ಲ . ರಾಜ್ಯದ ಹಿತದೃಷ್ಟಿಯಿಂದ ಪ್ರಶ್ನೆ ಉದ್ಭವವಾಗಲೆಬೇಕು. ಇದು ಯಾರ ಪರವಾಗಿ ಕೇಳತಕ್ಕ ಪ್ರಶ್ನೆ ಅಲ್ಲ. ಈ ಪ್ರಶ್ನೆಗೆ ಉತ್ತರ ದೊರಕಲೆಬೇಕು. ಈ ರಾಜ್ಯದಲ್ಲಿ ವಾರ್ತಾ ಇಲಾಖೆ, ಕಣ್ಣು, ಕಿವಿ, ಮೂಗು ಶರೀರಕ್ಕೆ ಎಷ್ಟು ಮುಖ್ಯವೋ ಅಷ್ಟೆ ಮುಖ್ಯ. ಈ ಇಲಾಖೆ ಬೇರೆ ಇಲಾಖೆಗೆ ಹೋಗತಕ್ಕದ್ದು ಅಲ್ಲ. ನಾನು ಅರ್ಥ ಸಚಿವರನ್ನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ, ಅವರು ಹತ್ತು ಕೋಟಿ ರೂಪಾಯಿ ಕೇಳಿರತಕ್ಕದ್ದು ಕಡಿಮೆ. ಹತ್ತು ಕೋಟಿ ರೂಪಾಯಿಗಳನ್ನು ಕೊಟ್ಟು ಪ್ರತಿ ದಿನ ಸರ್ಕಾರದ ಕೆಲಸ ಕಾರ್ಯಗಳು ಪ್ರಚಾರ ಇಲಾಖೆಯ ಮೂಲಕ ನಡೆಯಬೇಕಾದುದು ಮುಖ್ಯ. ಡೆಲ್ಲಿಯಲ್ಲಿ ಇವರದೊಂದು ಕಾರ್ಯಾಲಯ ಇದೆ, ವಾರ್ತಾ ಇಲಾಖೆಯದು. 25 ವರ್ಷಗಳಿಂದ, ಸ್ವಾತಂತ್ರ್ಯ ಬಂದಾಗಿನಿಂದ ಯಾವುದೋ ಒಂದು ರೂಂ ಇದೆ. ಅದು ಬಿಟ್ಟರೆ ಬೇರೆ ಇಲ್ಲ. ಅಲ್ಲಿ ಅಧಿಕಾರಿಗಳು ಒಳ್ಳೆಯವರು ಇರುತ್ತಾರೆ. ದರ್ಜಿಗೆ ಏರಿಸುವ ವ್ಯವಸ್ಥೆ ಒಳ್ಳೆಯದು. ಒಂದು ಕ್ಯಾಮರಾ ಬೇಕಾದರೆ ಬೇರೆ ಕಡೆಯಿಂದ ಬಾಡಿಗೆ ತರಬೇಕಾಗಿದೆ. ಇವರಿಗೆ ಸ್ವಂತ ಯಾವುದೂ ಇಲ್ಲ. ಕ್ಯಾಮರಾ ಇಲ್ಲ, ಫ್ಯಾಕ್ಸ್ ಇಲ್ಲ. ಪ್ರತಿಯೊಂದು ಅವ್ಯವಸ್ಥೆ ಇದೆ. ಈ ಅವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ತಾವು ಅಲ್ಲಿಗೆ ಹೋಗಬೇಕು. ಇಲ್ಲಿ ವಾರ್ತಾ ಇಲಾಖೆಯ ಕಟ್ಟಡ ಇದೆ. ನನಗನ್ನಿಸುತ್ತದೆ, ಸರ್ಕಾರದವರು ತಾವೇ ಸಾರಾಯಿ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದಾರಲ್ಲಾ ಅದಕ್ಕೆ ಇಟ್ಟುಕೊಳ್ಳುವುದು ಒಳ್ಳೆಯದು. ಆ ಕಟ್ಟಡ ಅದಕ್ಕೆ ಯೋಗ್ಯವಾದದ್ದು. ಸಾರಾಯಿ ಮಾಡುವುದಕ್ಕೆ ವಾರ್ತಾ ಇಲಾಖೆಯ ಮುಖ್ಯ ಕಟ್ಟಡ ಯೋಗ್ಯವಾಗಿದೆ. ತಾವು ಪ್ರತಿಯೊಬ್ಬರೂ ಎಲ್ಲಾ ಮಂತ್ರಿಗಳೂ ಹೋಗಿ ಪರಿಸ್ಥಿತಿಯನ್ನು ನೋಡಬೇಕು. ಸರ್ಕಾರಕ್ಕೆ ಪ್ರತಿದಿನ ಬೇಕು, ಫೋಟೋ ಬೇಕು, ಇವೆಲ್ಲಾ ವ್ಯವಸ್ಥೆ ಬೇಕು. ಆದರೆ ಇಲಾಖೆಯನ್ನು ತುಳಿಯತಕ್ಕೆ ವ್ಯವಸ್ಥೆ ಆಗಬಾರದು. ಈ ಇಲಾಖೆಗೆ ಹಿಂದೆ ಐಎಎಸ್, ಐಪಿಎಸ್ ಅಧಿಕಾರಿಗಳು ನಿರ್ದೇಶಕರಾಗಿ ಇರುತ್ತಿರಲಿಲ್ಲ. ಇತ್ತೀಚೆಗೆ ಸರ್ಕಾರಕ್ಕೆ ಒಂದು ರೀತಿ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವ ಅಪೇಕ್ಷೆ. ವೈಯಕ್ತಿಕವಾಗಿ ನಾನು ಯಾರ ಬಗ್ಗೆಯೂ ಅಕ್ಷೇಪಣೆ ಮಾಡುತ್ತಿಲ್ಲ. ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ಇಂತಹ ಇಲಾಖೆಗೆ ಹಾಕುವುದರಿಂದ ಒಳ್ಳೆಯದಾಗುವುದಿಲ್ಲ. ಈ ಇಲಾಖೆಗೆ ತಾಂತ್ರಿಕ ಪರಿಣಿತರನ್ನು ಏತಕ್ಕೆ ಹಾಕುವುದಿಲ್ಲ? ಈ ಎರಡು ಪ್ರಶ್ನೆಗಳಿಗೆ ತಾವು ದಯವಿಟ್ಟು ಉತ್ತರಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ:- ಪ್ರಶ್ನೆ ಕೇಳಿರುವುದು ವಾರ್ತಾ ಸಚಿವರನ್ನು, ಅವರು ಮರು ಪ್ರಶ್ನೆಯನ್ನು ಹಣಕಾಸಿನ ಸಚಿವರಿಗೆ ಹಾಕಿದ್ದಾರೆ. ನಮಗೆ ಇಲ್ಲಿರುವುದು ಒಂದು ಸರ್ಕಾರವೇ ಅಥವಾ ಎರಡು ಸರ್ಕಾರವೇ ಎಂಬ ಸಂಶಯ ಉಂಟಾಗಿದೆ. ಸರ್ಕಾರದ ಪರವಾಗಿ ಉತ್ತರ ಹೇಳತಕ್ಕ ವಾರ್ತಾ ಸಚಿವರು ಅರ್ಥ ಸಚಿವರ ಕಡೆಗೆ ಕೈ ತೋರಿಸತಕ್ಕ ಅಗತ್ಯ ಇರಲಿಲ್ಲ. ಇದು ಆಗುತ್ತದೋ ಇಲ್ಲವೋ ಎಂಬ ಪ್ರಶ್ನೆಯನ್ನು ನೇರವಾಗಿ ಹೇಳಬೇಕೇ ಹೊರತು, ನುಣುಚಿಕೊಳ್ಳುವುದಕ್ಕೆ ಅರ್ಥ ಸಚಿವರ ಮೇಲೆ ಹೊರೆ ಹಾಕತಕ್ಕದ್ದು ಸರಿಯಾದ ಕ್ರಮ ಆಗುವುದಿಲ್ಲ ಮತ್ತು ಸರಿಯಾದ ಉತ್ತರ ಆಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಒಂದು ಪ್ರಮುಖವಾದ ಪ್ರಶ್ನೆಯನ್ನು ಶ್ರೀ

ವಾಟಾಳ್ ನಾಗರಾಜ್ ಅವರು ಕೇಳಿದ್ದಾರೆ. ಅಭಿವೃದ್ಧಿ ಮಾಡುವುದಕ್ಕೆ ಅಧುನೀಕರಣ ಮಾಡುವುದಕ್ಕೆ ತಮ್ಮ ಹತ್ತಿರ ಹಣಕಾಸಿನ ಮುಗ್ಗಟ್ಟು ಇದೆ. ಒಂದು ತಾವು ಆ ಸ್ಥಾನದಲ್ಲಿರುವುದರಿಂದ ಕೇಳುತ್ತಿದ್ದೇನೆ, ಬೇರೆ ಯಾರೇ ಇದ್ದರೂ ಕೇಳುತ್ತಿರಲಿಲ್ಲ. ಹಿಂದೆ ಶ್ರೀ ವೀರಪ್ಪ ಮೊಯಿಲಿಯವರು ಮುಖ್ಯ ಮಂತ್ರಿಗಳಾಗಿದ್ದ ಕಾಲದಲ್ಲಿ ಒಂದು ಕೋಟಿ 38 ಲಕ್ಷ ರೂಪಾಯಿ ಪ್ರಚಾರ ಸಾಹಿತ್ಯವನ್ನು ಪ್ರಿಂಟ್ ಮಾಡಿದ್ದರು. ಅದಕ್ಕೆ ಹಣ ಪಾವತಿ ಮಾಡುವುದಿಲ್ಲವೆಂದು ಅಧಿಕಾರಕ್ಕೆ ಬಂದ ತಕ್ಷಣ ಹೇಳಿದಿರಿ. ಅಮೇಲೆ ಪಾವತಿ ಮಾಡಿದಿರಿ. ಜನ ಕೊಟ್ಟಂಥ ತೆರಿಗೆ ಹಣವನ್ನು ಯಾವುದೋ ಒಂದು ಪ್ರಚಾರಕ್ಕೆ ಮಾಡಿ ಒಬ್ಬರಿಗೂ ಅದನ್ನು ಡಿಸ್ಟ್ರಿಬ್ಯೂಟ್ ಮಾಡದೆ ಒಂದು ಕೋಟಿ 38 ಲಕ್ಷ ರೂಪಾಯಿ ಹಣವನ್ನು ಕೊಡುವುದಕ್ಕೆ ನಿಮಗೆ ಯಾರು ಅಧಿಕಾರ ಕೊಟ್ಟರು. ಇದು ಸರಿಯೆ? ಕಾನೂನುಬಾಹಿರವಾಗಿ ಆ ರೀತಿ ಮುದ್ರಣ ಮಾಡಿದ ಅಧಿಕಾರಿಗೆ, ಇನ್ನು ಮುಂದೆ ಯಾವುದೇ ಸರ್ಕಾರ ಈ ರೀತಿ ಮಾಡಬಾರದೆಂಬುದಕ್ಕೆ ಅವನ ಮೇಲೆ ಕ್ರಮ ತೆಗೆದುಕೊಂಡಿದ್ದೀರಾ? ನಿಮ್ಮಂಥವರು ಮಾಡದಿದ್ದರೆ ನಾನು ಯಾರಿಂದ ನಿರೀಕ್ಷೆ ಮಾಡಬಹುದು? ಒಂದು ಕೋಟಿ 38 ಲಕ್ಷ ರೂಪಾಯಿ ಕೊಟ್ಟಿದ್ದೀರಲ್ಲಾ ದಯಮಾಡಿ ಆ ಪ್ರತಿಯನ್ನು ವಿತರಣೆ ಮಾಡಿ.

ಶ್ರೀ ಎಂ.ಸಿ.ನಾಣಯ್ಯ:- ನೇರವಾಗಿ ಈ ಪ್ರಶ್ನೆಗೆ, ಇದು ಉದ್ಭವಿಸದೆ ಹೋದರೂ ತಾವು ಅನುಮತಿ ಕೊಟ್ಟರೆ ಉತ್ತರ ಕೊಡುತ್ತೇನೆ. ಇಲ್ಲದಿದ್ದರೆ, ಬೇರೆ ಪ್ರಶ್ನೆ ಕೇಳಿದರೆ ಪೂರ್ತಿ ಉತ್ತರ ಕೊಡುತ್ತೇನೆ. ಇದಕ್ಕೆ ಸಮಗ್ರವಾಗಿ ಉತ್ತರ ಕೊಡಬೇಕಾಗುತ್ತದೆ. ನೇರವಾಗಿ ಈ ಪ್ರಶ್ನೆಯಿಂದ ಆ ಪ್ರಶ್ನೆ ಉದ್ಭವಿಸುವುದಿಲ್ಲ. ಮಾನ್ಯ ಸಭಾಧ್ಯಕ್ಷರು ಅನುಮತಿ ಕೊಟ್ಟರೆ ಉತ್ತರ ಹೇಳುತ್ತೇನೆ.

ಅಧ್ಯಕ್ಷರು:- ಪ್ರಶ್ನೆ ಬಹಳ ಮುಖ್ಯವಾದುದೆಂದು ಉತ್ತರ ಕೊಡುವುದಕ್ಕೆ ತಯಾರಿದ್ದೀರಿ; ಆದರೆ ಸಮಯ ಇಲ್ಲವಲ್ಲಾ.

ಶ್ರೀ ಎಂ.ಸಿ.ನಾಣಯ್ಯ:- ಅದು ಒಂದೇ ಕಷ್ಟ. ಇದಕ್ಕೆ ಬಹಳ ದೀರ್ಘವಾಗಿ ಉತ್ತರ ಹೇಳಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಇದು ಸಮಯದ ಪ್ರಶ್ನೆ ಅಲ್ಲ. ಇಕ್ಕಟ್ಟಿನ ಪ್ರಶ್ನೆ. ಗೊಂದಲದ ಪ್ರಶ್ನೆ. ಸರ್ಕಾರದ ಗುಟ್ಟು ಬಯಲಾಗುತ್ತದೆ. ಅವರ ಅಪರಾಧ ಜನರಿಗೆ ಗೊತ್ತಾಗುತ್ತದೆ.

ಅಧ್ಯಕ್ಷರು:- ನಾಳೆ ಕೇಳಿ ಹೇಳುತ್ತಾರೆ, ಈಗ ವಾಟಾಳ್ ನಾಗರಾಜ್ ಅವರ ಪ್ರಶ್ನೆಗೆ ಉತ್ತರಿಸಿ.

ಶ್ರೀ ಎಂ.ಸಿ.ನಾಣಯ್ಯ:- ಈಗ 108 ಹುದ್ದೆಗಳು ಏನು ಖಾಲಿ ಇವೆ, ಆ ಹುದ್ದೆಗಳನ್ನು ತುಂಬುತ್ತೀರೋ ಇಲ್ಲವೋ ಎಂದು ನೇರವಾಗಿ ಕೇಳಿದಿರಿ. ಅದಕ್ಕೆ ನಾನು ಹೇಳಿದೆ, ಅವಶ್ಯಕವಾಗಿ ತುಂಬಬೇಕಾದ ಹುದ್ದೆಗಳನ್ನು ಗುರುತು ಹಚ್ಚಿದ್ದೇವೆ. ಗುರುತು ಹಚ್ಚಿ ಈಗಾಗಲೇ ಆರ್ಥಿಕ ಇಲಾಖೆಗೆ ಇಕಾನಮಿ ಮೆಷರ್ಸ್ ಅನ್ನು ಸಡಿಲ ಮಾಡಿ ಅನುಮತಿ ಕೊಡಬೇಕೆಂದು ಕೇಳಿದ್ದೇವೆ. ಆರು ತಿಂಗಳೊಳಗೆ ಆ ಕೆಲಸವನ್ನು ಮಾಡುತ್ತೇವೆ. ಕಟ್ಟಡದ ಬಗ್ಗೆ ಹೇಳಿದರು, ನಿಜ. ಆ ಕಟ್ಟಡವನ್ನು ನಾನು ನೋಡಿದ ಮೇಲೆ ಆ ಕಟ್ಟಡವನ್ನು ಕೆಡವಿ ಆ ಭಾಗದಲ್ಲಿ ಉತ್ತಮ ಕಟ್ಟಡ ನಿರ್ಮಾಣ ಮಾಡಿ ಇನ್‌ಫಾರ್‌ಮೇಶನ್ನಿಗೆ ಸಂಬಂಧಪಟ್ಟ ಎಲ್ಲಾ ಕಛೇರಿಗಳನ್ನು ಆ ಕಟ್ಟಡದಲ್ಲಿ ಆಳವಡಿಸಬೇಕೆಂಬ ತೀರ್ಮಾನಕ್ಕೆ ಬಂದಿದ್ದೇನೆ. ಅಪ್‌ಗ್ರೇಡ್ ಮಾಡುವುದಕ್ಕೆ ಈಗಾಗಲೇ ಹೇಳಿದ್ದೇನೆ. ಈ ವರ್ಷ ಇಲಾಖೆಯಿಂದ 50 ಲಕ್ಷ ರೂಪಾಯಿ

ಹೆಚ್ಚು ಅನುದಾನ ಕೊಟ್ಟಿದ್ದಾರೆ. 1996-97ಕ್ಕೆ ಹೆಚ್ಚಿನ ಅನುದಾನ ಕೊಡುತ್ತೇವೆಂದು ಹೇಳಿದ್ದಾರೆ. ಆ ಹಿನ್ನಲೆಯಲ್ಲಿ ಆಧುನೀಕರಣ ಎಂದು ಹೇಳತಕ್ಕ ಸಲಹೆಯನ್ನು ವಿಷಯ ಸಮಿತಿಯಲ್ಲಿ ಸೂಚನೆ ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ನಿರ್ದೇಶಕರ ಹುದ್ದೆಯ ಬಗ್ಗೆ ಅವರು ಹೇಳತಕ್ಕ ವಿಚಾರವನ್ನು ತಾತ್ವಿಕವಾಗಿ ನಾನು ಒಪ್ಪುತ್ತೇನೆ. ಪರಿಣಿತರು ಎಂದು ಹೇಳಿದ ಕೂಡಲೆ ನಮ್ಮ ಇಲಾಖೆಯಲ್ಲಿ ಇರತಕ್ಕವರು ಆ ಮಟ್ಟಕ್ಕೆ ಏರಿದ್ದಾರೆಯೇ ಎಂಬ ಪ್ರಶ್ನೆ ಬರುತ್ತದೆ. ಅದರ ಬಗ್ಗೆ ತಾತ್ವಿಕವಾಗಿಒಪ್ಪದಿದ್ದರೂ ಸರ್ಕಾರ ಇದರ ಬಗ್ಗೆ ಗಮನ ಹರಿಸುತ್ತದೆಂದು ಹೇಳುತ್ತೇನೆ.

ವಿಷಯ:- ಬೆಂಗಳೂರಿನಲ್ಲಿರುವ ವಕೀಲರ ಸಂಘಕ್ಕೆ ಹೊಸ ಕಟ್ಟಡ ನಿರ್ಮಾಣ.
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 23(350)

ಶ್ರೀ ರಾಮಲಿಂಗಾರೆಡ್ಡಿ(ಜಯನಗರ):- ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೆಂಗಳೂರು ಸಿವಿಲ್ ನ್ಯಾಯಾಲಯದ ಸಂಕೀರ್ಣದಲ್ಲಿರುವ ವಕೀಲರ ಸಂಘದ ಕಟ್ಟಡ ಬಹಳ ಹಳೆಯದಾಗಿದ್ದು ಈ ಕಟ್ಟಡವನ್ನು ಕೆಡವಿ ಹೊಸ ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕಾಗಿ ತಗಲುವ ಅಂದಾಜು ವೆಚ್ಚವೆಷ್ಟು?

ಇ) ಈ ಕಟ್ಟಡದ ನಿರ್ಮಾಣ ಕಾರ್ಯವನ್ನು ಯಾವಾಗ ಕೈಗೊಳ್ಳಲಾಗುವುದು?

ಈ) ಹಾಗಿದ್ದಲ್ಲಿ ಉದ್ದೇಶಿತ ಕಟ್ಟಡದಲ್ಲಿ ಒದಗಿಸಲಿರುವ ಸೌಕರ್ಯಗಳೇನು?

ಉ) ಈ ಕಟ್ಟಡದ ನಿರ್ಮಾಣ ಯಾವಾಗ ಪೂರ್ಣಗೊಳ್ಳುವುದು ಹಾಗೂ ಅಲ್ಲಿಯವರೆಗೆ ಮೇಲ್ಕಂಡ ಸಂಘಕ್ಕೆ ವಸತಿ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಎಂ.ಪಿ.ನಾಣಯ್ಯ (ಕಾನೂನು ಮತ್ತು ವಾರ್ತಾ ಸಚಿವರು):- (ಅ) ಹೊಸ ಕಟ್ಟಡ ಕಟ್ಟಲು ವಕೀಲರ ಸಂಘದಿಂದ ಮನವಿ ಇದೆ.

(ಆ) ಕಟ್ಟಡದ ಮೊದಲನೆ ಹಂತದ ನಿರ್ಮಾಣಕ್ಕೆ ರೂ. 340.00 ಲಕ್ಷವೆಚ್ಚ ಅಂದಾಜು ಮಾಡಲಾಗಿದೆ.

(ಇ) ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ವಕೀಲರ ಸಂಘದ ಹೊಸ ಕಟ್ಟಡವನ್ನು ಸರ್ಕಾರವು ನಿರ್ಮಿಸುವಂತೆ ವಕೀಲರ ಸಂಘ, ಬೆಂಗಳೂರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 7194:94ಅನ್ನು ದಾಖಲು ಮಾಡಿದೆ. ಈ ಅರ್ಜಿಯ ಮೇಲೆ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಿದ ತೀರ್ಪಿನ ವಿರುದ್ಧ ರಿಟ್ ಅಪೀಲು ದಾಖಲು ಮಾಡಲು ಸರ್ಕಾರದ ಆದೇಶವನ್ನು ಹೊರಡಿಸಿದೆ.

(ಈ) ಸದ್ಯಕ್ಕೆ ಉದ್ಭವಿಸುವುದಿಲ್ಲ.

(ಉ) ಉದ್ಭವಿಸುವುದಿಲ್ಲ.